# ಸಿ.ಟಿ.ರವಿ, ಹೆಬ್ಬಾಳ್ಕರ್ ಸಂಧಾನಕ್ಕೆ ಸಭಾಪತಿ ಹೊರಟ್ಟಿ ಪ್ರಯತ್ನ?

## ನಾಳೆ ಬೆಳಗಾವಿ ಕಾಂಗ್ರೆಸ್ ಅಧಿವೇಶನ ವೇಳೆ ಸಿಎಂ ಜತೆ ಹೊರಟ್ಟಿ ಚರ್ಚೆ?

## ಸದನದ ಘನತೆ ಕಾಪಾಡುವ ಉದ್ದೇಶ | ಪ್ರಕರಣ ಅಂತ್ಯಗೊಳಿಸಲು ಚಿಂತನೆ

■ **ಉದಯವಾಣಿ ಸಮಾಚಾರ**



**ಬೆಂಗಳೂರು:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ.ರವಿ ನಡುವಿನ ವಾಗ್ವಾದ ಪ್ರಕರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದು, ವಿಧಾನ ಪರಿಷತ್ತಿನ ಘನತೆ-ಗಾಂಭೀರ್ಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಸಭಾಪತಿ ಬಸವರಾಜ ಹೊರಟ್ಟಿ ಅವರು ಈ ಪ್ರಕರಣವನ್ನು ಸಂಧಾನದ ಮೂಲಕ ಮಂಗಳ ಹಾಡುವುದಕ್ಕೆ ಮುಂದಾಗಿದ್ದು, ಸಿಎಂ ಜತೆ ಚರ್ಚೆ ನಡೆಸಲು ತೀರ್ಮಾನಿಸಿದ್ದಾರೆ.

ಇದೇ ತಿಂಗಳು 27ರಂದು(ಶುಕ್ರವಾರ) ಬೆಳಗಾವಿ ಸುವರ್ಣಸೌಧದ ಆವರಣದಲ್ಲಿ ನಡೆಯುವ ಎಐಸಿಸಿ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವ ಹೊರಟ್ಟಿ ಆ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಜತೆ ಈ ವಿಚಾರ ಪ್ರಸ್ತಾಪಿಸಿ ಪ್ರಕರಣ ಅಂತ್ಯಗೊಳಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ.

ಈ ಘಟನೆಯ ಬಳಿಕ ಬೇರೆ ರಾಜ್ಯದ ಸ್ಪೀಕರ್ ಹಾಗೂ ಸಭಾಪತಿಗಳು ಹೊರಟ್ಟಿಯವರಿಗೆ ಕರೆ ಮಾಡಿ ಚರ್ಚೆ ನಡೆಸಿದ್ದಾರೆ. ಕೆಲವರು ಹೊರಟ್ಟಿಯವರ ರೂಲಿಂಗ್ ಶ್ಲಾಘಿಸಿದರೆ, ಇನ್ನು ಕೆಲವರು ಕರ್ನಾಟಕದ ಘನ ಸಂಸದೀಯ ಇತಿಹಾಸದ ಬಗ್ಗೆ ಮಾತನಾಡಿದ್ದಾರೆ.

▶ 4ನೇ ಪುಟಕ್ಕೆ

# ಸಿ.ಟಿ.ರವಿ ಕೇಸ್ ಸಿಐಡಿ ತನಿಖೆಗೆ

## ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಎಂಎಲ್‌ಸಿ ರವಿ ಅಶ್ಲೀಲ ಪದ ಬಳಕೆ ಕೇಸ್: ಸಮಗ್ರ ತನಿಖೆಗಾಗಿ ಸಿಐಡಿಗೆ ವರ್ಗ ರಾಜ್ಯ ಸರ್ಕಾರದಿಂದಲೇ ಅಧಿಕತ ಆದೇಶ | ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದ ತಂಡಕ್ಕೆ ತನಿಖೆ ಹೊಣೆ?

■ **ಉದಯವಾಣಿ ಸಮಾಚಾರ**

ಹುಬ್ಬಳ್ಳಿ/ಬೆಂಗಳೂರು: ರಾಜ್ಯದಲ್ಲಿ ಭಾರೀ ವಿವಾದದ ಕಿಚ್ಚು ಹೊತ್ತಿಸಿರುವ 'ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅಶ್ಲೀಲ ಪದ ಬಳಕೆ ಪ್ರಕರಣ' ಇದೀಗ ಹೊಸ ಮಜಲು ತಲುಪಿದೆ. ಈವರೆಗೆ ಪೊಲೀಸರು ಹಾಗೂ ಪರಿಷತ್ ಸಭಾಪತಿ ಅಂಗಳದಲ್ಲೇ ಸುತ್ತುಹಾಕುತ್ತಿದ್ದ ಈ ಪ್ರಕರಣ ಈಗ ಮತ್ತೊಂದು ತಿರುವು ಪಡೆದುಕೊಂಡಿದ್ದು, ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿರುವುದಾಗಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಂಗಳವಾರ ಘೋಷಿಸಿದ್ದಾರೆ.

ಇದರ ಬೆನ್ನಲ್ಲೇ ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶವೂ ಹೊರಬಿದ್ದಿದೆ. ಸದ್ಯದಲ್ಲೇ ವಿಶೇಷ ತನಿಖಾ ತಂಡ ರಚನೆ ಆಗುವ ಸಾಧ್ಯತೆ ಇದೆ. ▶ 14ನೇ ಪುಟಕ್ಕೆ

### ನಿಯಮ ನೋಡಿ ಸ್ಥಳ ಮಹಜರಿಗೆ ಅವಕಾಶ



"ಸರ್ಕಾರ ಪ್ರಕರಣ ಸಿಐಡಿಗೆ ವಹಿಸುವಾಗ ಪೊಲೀಸರು 'ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ' ಎಂದು ಉಲ್ಲೇಖಿಸಿದ್ದು ತಪ್ಪು. ಅದನ್ನು ಪರಿಶೀಲಿಸುತ್ತಿದ್ದೇವೆ. ಸ್ಥಳ ಮಹಜರು ಪರಿಸ್ಥಿತಿ ಎದುರಾದರೆ ನಮ್ಮದೇ ನಿಯಮದ ಪ್ರಕಾರ ಅವಕಾಶ ಮಾಡಿಕೊಡುತ್ತೇವೆ.

● ಬಸವರಾಜ ಹೊರಟ್ಟಿ, ಸಭಾಪತಿ

### ಲಕ್ಷ್ಮೀ ಹೆಬ್ಬಾಳ್ಕರ್-ಸಿ.ಟಿ.ರವಿ ಆಣೆ-ಪ್ರಮಾಣ ಜಟಾಪಟಿ

#### ಧರ್ಮಸ್ಥಳದಲ್ಲಿ ಆಣೆ ಮಾಡಿ



"ಸಿ.ಟಿ.ರವಿ ನನ್ನ ಬಗ್ಗೆ ಅಶ್ಲೀಲ ಪದ ಬಳಸಿಲ್ಲ ಎಂದಾದರೆ ಧರ್ಮಸ್ಥಳ ಮಂಜುನಾಥನ ಸನ್ನಿಧಾನಕ್ಕೆ ಬರಲಿ, ನಾನೂ ಬರುತ್ತೇನೆ. ಆಣೆ ಪ್ರಮಾಣ ಮಾಡೋಣ. ರಾಜಕಾರಣದ ಸ್ಟಂಟ್ ನನಗೆ ಬೇಕಾಗಿಲ್ಲ. ಮಾಡಬಾರದನ್ನು ಮಾಡಿ ಬಿಜೆಪಿ ನಾಯಕರೇ ವಿಜೃಂಭಿಸುತ್ತಿದ್ದಾರೆ.

● ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

VS

#### ಕೆಸರಿನಿಂದ ದೂರವಿರುವೆ



"ಕೇಸ್ ಆದ ಮೇಲೆ ಎಲ್ಲವೂ ಅಪ್ರಸ್ತುತ. ಮೊದಲೇ ಆಣೆ ಬಗ್ಗೆ ಮಾತನಾಡಬಹುದಿತ್ತು. ಈಗ ಅದು ಮುಗಿದ ಕಥೆ. ನನ್ನ ಮೇಲೆ ಕೆಸರು ಬಿದ್ದರೂ, ಕೆಸರಿನ ಮೇಲೆ ನಾನು ಬಿದ್ರೂ ನಾನೇ ಸ್ನಾನ ಮಾಡಬೇಕು. ಹೀಗಾಗೇ ದೊಡ್ಡವರು, 'ಕೆಸರಿನಿಂದ ನೀನೇ ಸ್ವಲ್ಪ ದೂರ ಇದ್ದು ಬಿಡು' ಎಂದಿದ್ದಾರೆ.

● ಸಿ.ಟಿ.ರವಿ, ಪರಿಷತ್ ಸದಸ್ಯ

### ನ್ಯಾಯಾಂಗ ತನಿಖೆಗೆ ವಹಿಸಿ: ಗೌರ್ನರ್‌ಗೆ ಬಿಜೆಪಿ ಮನವಿ

ಬೆಂಗಳೂರು: ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ರಕ್ಷಣೆ ನೀಡುವುದರ ಜತೆಗೆ ಬಂಧನೋತ್ತರ ವಿದ್ಯಮಾನದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಬಿಜೆಪಿ ನಿಯೋಗ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದೆ. ▶ ವಿವರ: 5

**ಸಭಾಪತಿ, ಗೌರ್ನರ್, ಡಿಜಿಗೆ ಸಿ.ಟಿ. ರವಿ 7 ಪುಟಗಳ ದೂರು ಸಲ್ಲಿಕೆ** » 5